**ಪಿ.ಡಬ್ಲ್ಯೂ .1** **ಅಸಲು ದಾವಾ ಸಂಖ್ಯೆ .396/2016**

**ದಿನಾಂಕಃ- 28.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ-2 ಮತ್ತು 3 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ.ಸಿ ಎಸ್ ಎ. ರವರಿಂದ.**

**ಬಸಪ್ಪರವರು ನನ್ನ ಚಿಕ್ಕಪ್ಪ, ಅವರು ಹೆಸರಳ್ಳಿ ಗ್ರಾಮದವರು ಆಗಿದ್ದಾರೆ. ಸದರಿಯವರಿಗೆ ಒಬ್ಬ ಮಗ ಮತ್ತು 3 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರುಗಳೆಂದರೆ ಸೋಮಕ್ಕ, ಸಿದ್ದಗಂಗಮ್ಮ, ಗಿರಿಜಾ ಹಾಗೂ ರೇಣುಕೇಶ್ ಎಂದರೆ ಸರಿ. ರೇಣುಕೇಶ್ ತೀರಿಕೊಂಡಿದ್ದಾರೆ ಎಂದರೆ ಸರಿ. ರೇಣುಕೇಶ್ 2013 ರಲ್ಲಿ ತೀರಿಕೊಂಡಿದ್ದಾರೆ. ರೇಣುಕೇಶನ ಹೆಂಡತಿ ಆರ್. ಜೆ. ಸುಧಾ ಎಂದರೆ ಸರಿ. ಬಸಪ್ಪರವರಿಗೆ ಬೆಂಗಳೂರಿನಲ್ಲಿ 2 ಸೈಟು ಇದ್ದವು ಎಂದರೆ ಸರಿ. ಸದರಿ ಸೈಟುಗಳು ಮತ್ತಿಕೆರೆಯಲ್ಲಿ ಸೈಟ್ ನಂ.10 ಮತ್ತು ಬಿ ಕೆ ನಗರದಲ್ಲಿ ಸೈಟ್ ನಂ.2 ಆಗಿದ್ದವು ಎಂದರೆ ಸರಿ. ಸದರಿ ಸೈಟುಗಳನ್ನು ಬಸಪ್ಪ ಸ್ವಾಯರ್ಜಿತವಾಗಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ಬಸಪ್ಪರವರು ತೀರಿಕೊಂಡ ಮೇಲೆ ರೇಣುಕೇಶ್, ಸೋಮಕ್ಕ ಮತ್ತು ಅವರ ತಾಯಿ ಸೇರಿ ದಿಃ 08.02.2013 ರಂದು ಬಸಪ್ಪರವರ ಸ್ವಾಯರ್ಜಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸೈಟುಗಳನ್ನು ಹೆಣ್ಣುಮಕ್ಕಳಿಗೆ ಮತ್ತು ಹೆಸರಳ್ಳಿ ಜಮೀನನ್ನು ಮಗನಿಗೆ ಬಿಟ್ಟಿದ್ದರು ಎಂದಿದ್ದಾರೆ. ಸೈಟುಗಳನ್ನು ಮಾತ್ರ ವಿಭಾಗ ಮಾಡಿಕೊಂಡಿದ್ದರು, ಜಮೀನುಗಳನ್ನು ವಿಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದ ಪ್ರಕಾರ ಸೈಟ್ ನಂ.10 ನೇ ರೇಣುಕೇಶ್ ರವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿಃ 08.02.2013 ರ ವಿಭಾಗ ಪತ್ರವನ್ನು ನಾನು ನೋಡಿಲ್ಲ ಮತ್ತು ಅದಲ್ಲಿರುವ ವಿಚಾರವನ್ನು ತಿಳಿದುಕೊಂಡಿಲ್ಲ.**

**ವಿಭಾಗ ಪತ್ರದ ಪ್ರಕಾರ ಸೈಟ್ ನಂ.10 ರೇಣುಕೇಶ್ ರವರಿಗೆ ಮತ್ತು ಸೈಟ್ ನಂ.2 ಒಂದು ಮತ್ತು ಎರಡನೇ ಪ್ರತಿವಾದಿಯರ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮತ್ತು ಸರ್ವೆ ನಂ.2/4(ಎ) ಮತ್ತು ಸರ್ವೆ ನಂ.19 ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಮೇಲ್ಕಂಡ ಸ್ವತ್ತುಗಳು ಬಸಪ್ಪರವರ ಸ್ವಾಧೀನದಲ್ಲಿ ಎಂದರೆ ಸಾಕ್ಷಿ ನನ್ನ ಸ್ವಾಧೀನದಲ್ಲಿ ಇತ್ತು ಎಂದಿದ್ದಾರೆ. ನನ್ನ ಸ್ವಾಧೀನದಲ್ಲಿ ಇದ್ದವು ಎಂದು ತೋರಿಸಲು ಖಾತೆ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ದಾಖಲೆ ಸಲ್ಲಿಸಿದ್ದೇನೆ ಎಂದಿದ್ದಾರೆ. ಬಸಪ್ಪ ತೀರಿಕೊಂಡ ಮೇಲೆ ಅವರ ಹೆಂಡತಿ ಮಕ್ಕಳಿಗೆ ದಾವಾ ಆಸ್ತಿ ಸೇರಬೇಕು ಮತ್ತು ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿಯು ನಾನು ಸ್ವಾಧೀನದಲ್ಲಿ ಇದ್ದೇನೆ ಎಂದಿದ್ದಾರೆ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪ ತೀರಿಕೊಂಡ ಮೇಲೆ ಆಸ್ತಿಗಳು ಬಸಪ್ಪನ ಮಗ ರೇಣುಕೇಶನ ಹೆಸರಿಗೆ ಖಾತೆ ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ರೇಣುಕೇಶನ ಹೆಂಡತಿ ಹೆಸರಿಗೆ ಆಗಿತ್ತು ಎಂದಿದ್ದಾರೆ. ಬಸಪ್ಪ ತೀರಿಕೊಂಡ ಒಂದು ವರ್ಷಕ್ಕೆ ರೇಣುಕೇಶ್ ತೀರಿಕೊಂಡಿದ್ದಾರೆ ಎಂದರೆ ಸರಿ. ರೇಣುಕೇಶ್ ತೀರಿಕೊಂಡ ಮೇಲೆ ಆತನ ಹೆಂಡತಿ ಪ್ರತಿವಾದಿಯರಿಗೆ ಗೊತ್ತಾಗಾದ ರೀತಿಯಲ್ಲಿ ದಾವಾ ಸ್ವತ್ತಿನ ಖಾತೆ ಪಹಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.**

**ನಾನು ಪ್ರತಿವಾದಿಯರಿಗೆ ಮೋಸ ಮಾಡುವ ಸಲುವಾಗಿ ಜಯಸುಧಾ ರವರ ಜೊತೆ ಸೇರಿ ಕ್ರಯ ಪತ್ರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮದುವೆ ಆಗಿ ಬೆಂಗಳೂರಿನಲ್ಲಿ ವಾಸವಾಗಿದ್ದು ಆಗಾಗ ಊರಿಗೆ ಬಂದು ಹೋಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರು ಜಯಸುಧಾ ಮತ್ತು ನನ್ನನ್ನು ಸೇರಿಸಿ ಅಸಲು ದಾವಾ ಸಂಖ್ಯೆ: 145/2014 ರಂತೆ ಭಾಗಾಂಶಕ್ಕಾಗಿ ಕೇಸು ಹಾಕಿದ್ದಾರೆ ಎಂದರೆ ಸರಿ. ದಾವೆಯಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳ ಮೇಲೆ ಪ್ರತಿವಾದಿಯರಿಗೆ ಭಾಗಾಂಶದ ಹಕ್ಕು ಇದೆ ತೀರ್ಮಾನವಾಗಿದೆ ಎಂದರೆ ನನಗೆ ಗೊತ್ತಿಲ್ಲ.**

ದಾವಾ ಸ್ವತ್ತು ಪ್ರತಿವಾದಿಯರ ಆಸ್ತಿಯಾಗಿರುವುದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದು ತೀರ್ಮಾನವಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಿಃ **03.03.2014** ರ ಕ್ರಯ ಪತ್ರವನ್ನು ನಾನು ಆ ದಾವೆಯಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿ ಇದ್ದಾರೆ ಎಂದು ತೀರ್ಮಾನ ಆಗಿದೆ ಎಂದರೆ ಸಾಕ್ಷಿ ಜಂಟಿಯಲ್ಲಿ ಇಲ್ಲ ಎಂದಿದ್ದಾರೆ. ರೇಣುಕೇಶ್ ತೀರಿಕೊಂಡ ಮೇಲೆ ಆಸ್ತಿ ಜಯಸುಧಾ ಮತ್ತು ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ. ದಿಃ **03.03.2014** ರಲ್ಲಿ ಜಯಸುಧಾ ಒಬ್ಬರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗಲೂ ನನ್ನ ಸುಪರ್ದಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಭಾಗಾಂಶದ ಡಿಕ್ರಿಯನ್ನು ಪ್ರಶ್ನಿಸಿ ನಾನು ಅಥವಾ ಬೇರೆ ಯಾರು ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರದಲ್ಲಿ ಜಯಸುಧಾ ರವರಿಂದ ಅವರು ಆಸ್ತಿಗೆ ಓಡಾಡಲು ಆಗುವುದಿಲ್ಲ ಮತ್ತು ಮಕ್ಕಳ ಪೋಷಣೆ ಸಲುವಾಗಿ ಮಾರಾಟ ಮಾಡುತ್ತಿರುವುದಾಗಿ ಹೇಳಿ ಬರೆಸಿಕೊಂಡಿದ್ದೇನೆ ಎಂದರೆ ಸಾಕ್ಷಿಯು ಅವರು ಬರೆದು ಕೊಟ್ಟಿದಾರೆ ಎಂದಿದ್ದಾರೆ. ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರ ಮತ್ತು ಇತರೆ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಹೊಡೆದುಕೊಳ್ಳುವ ಸಲುವಾಗಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.